**ಪಾಠ–3** *ಜುಲೈ 14–20

# ಆದಿಸಭೆಯ ಜೀವನ



<u>ಸಬ್ಬತ್ತಿನ ಮಧ್ಯಾಹ್ನ :</u>

**ಈ ವಾರದ ಪಾಠದ ಅಧ್ಯಯನಕ್ಕಾಗಿ** ಅ.ಕೃ. 2:42–46; ಅ.ಕೃ. 4:34–35; ಅ.ಕೃ 3:1–26; ಅ.ಕೃ. 4:1–18; ಅ.ಕೃ 5:1–11; ಅ.ಕೃ. 5:34–39.

**ಸ್ಮರಣವಾಕ್ಯ : "ಅವರು ದಿನಾಲು ಏಕ ಮನಸ್ಸಿನಿಂದ ದೇವಾಲಯದಲ್ಲಿ ಕೊಡುತ್ತಾ ಮನೆಮನೆಗಳಲ್ಲಿ ರೊಟ್ಟಿಮುರಿದು ಉಲ್ಲಾಸದಿಂದಲೂ ಸರಲ ಹೃದಯದಿಂದಲೂ ಊಟಮಾಡುತ್ತಾ ಇದ್ದರು; ದೇವರನ್ನು ಕೊಂಡಾಡುವವರಾಗಿಯೂ ಜನರೆಲ್ಲರ ದಯವನ್ನು ಹೊಂದುವವರಾಗಿಯೂ ಇದ್ದರು. ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು. ಅ.ಕೃ. 2:46–47.**

ಆದಿಸಭೆಯ ಅಂತ್ಯಕಾಲ ಕುರಿತು ಪರಿಜ್ಞಾನ ಅಷ್ಟೇನು ಬಲವಾಗಿರಲಿಲ್ಲ. ಮೆಸ್ಸೀಯನ ರಾಜ್ಯ ಸ್ಥಾಪನೆಗೆ ಕುರಿತಂತೆ ಹೇಳಲ್ಪಟ್ಟ ಪ್ರಶ್ನೆಗಳಿಗೆ ಯೇಸುಕ್ರಿಸ್ತನು ಕೊಡುತ್ತಿದ್ದ ಉತ್ತರಗಳು ಕಾಲಾತೀತವಾಗಿರುತ್ತಿತ್ತು *(ಅ.ಕೃ. 1:6–8).* ಪವಿತ್ರಾತ್ಮನ ಬರುವಿಕೆ ಮತ್ತು ಅಪೋಸ್ತಲರ ಕೃತ್ಯಗಳು ಸಂಪೂರ್ಣಗೊಳ್ಳುವಿಕೆಯನ್ನು ಅವಲಂಬಿಸಿದಂತೆಯೂ ಇರುತ್ತಿತ್ತು. ಹೀಗಾಗಿ ಪಂಚಶತ್ತಾಮ ದಿನದ ಅನುಭವದೊಂದಿಗೆ ಎಲ್ಲವೂ ಮುಗಿದಂತಾಯಿತು ಎಂದುಕೊಂಡರು. ಅವರು ಅಂದು ಪವಿತ್ರಾತ್ಮನ ವರವನ್ನು ಪಡೆದುಕೊಂಡಿದ್ದರು ಮತ್ತು ಪ್ರಪಂಚಕ್ಕೆ ಅಂದೇ ಸುವಾರ್ತೆ ಸಹ ಸಾರಿದ್ದರು. ಅದರ ಅರ್ಥ : ಅಪೋಸ್ತಲರು ಯರೂಸಲೇಮನ್ನು ಬಿಟ್ಟು ಹೋಗಿರಲಿಲ್ಲ ನಿಜ ಆದರೆ ಪ್ರಪಂಚವೇ ಅವರ ಬಳಿಗೆ ಬಂದಿತ್ತು *(ಅ.ಕೃ. 2:5–11).*

ಅದಕ್ಕೆ ಕಾರಣ : ಕಾಲ ಸಮೀಪವಾಯಿತು ಎಂದು ಅವರು ಭಾವಿಸಿದ್ದು. ತಮ್ಮಲ್ಲಿದ್ದ ಆಸ್ತಿಪಾಸ್ತಿಗಳನ್ನೆಲ್ಲ ಮಾರಿದ್ದರು. ಆಧ್ಯಾತ್ಮಿಕ ಜ್ಞಾನಾರ್ಜನೆಗೆ ತಮ್ಮನ್ನು ಒಪ್ಪಿಸಿಕೊಟ್ಟಿದ್ದರು. ಕ್ರಿಸ್ತನ ಕುರಿತು ಸಾಕ್ಷಿಕೊಡುವದರಲ್ಲಿ ಅನ್ಯೋನ್ಯತೆ ಸಾಧಿಸಿದ್ದರು. ಈ ಎಲ್ಲ ಚಟುವಟಿಕೆಗಳು ಯೆರೂಸಲೇಮಿಗೆ ಮಾತ್ರ ಸೀಮಿತವಾಗಿತ್ತು. ಬಡವರಿಗೆ ತಮ್ಮಲ್ಲಿರುವದನ್ನು ಹಂಚಿಕೊಡುವ ಅವರ ಸಹಾಯಮಾಡುವ ಸಾಮಾಜಿಕ ಕಳಕಳಿ ಮುಂದೆ ಸಮಸ್ಯೆಯಾಗಿ ಮಾರ್ಪಟ್ಟಿತ್ತು. ಆಗ ದೇವರೇ ಮಧ್ಯಸ್ತಿಕ ವಹಿಸಿ, ಸಭೆಯ ಒಗ್ಗಟ್ಟನ್ನು ಕಾಪಾಡಿದ್ದನು. ಇದರ ಜೊತೆಗೆ ಅವರನ್ನು ವಿರೋಧಿಸುವವರ ಕೂಡ ಹೋರಾಡುವ ಸಮಯ ಸಹ ಇದೇ ಕಾಲಮಾನದಲ್ಲಿ ನಡೆದಿತ್ತು. ಇದೆಲ್ಲದರ ನಡುವೆಯು ಅವರಲ್ಲಿದ್ದ ದೇವನಂಬಿಕೆಯನ್ನು ಮಾತ್ರ ಯಾರಿಂದಲೂ ಅಲುಗಾಡಿಸಲಾಗಿರಲಿಲ್ಲ.

## ಬೋಧನೆ ಮತ್ತು ಅನ್ಯೋನ್ಯತೆ

ಪಂಚಾಶತ್ತಮ ದಿನದ ನಂತರ, ಲೂಕನು ಯೆರೂಸಲೇಮಿನ ಸಭೆಯ ಆಂತರಿಕ ಜೀವನದ ವರ್ಣನೆಯನ್ನು ನಿರೂಪಿಸತೊಡಗುತ್ತಾನೆ : "ಇವರು (ಸಭೆಯವರು) ಅಪೋಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು" ಅ.ಕೃ. 2:42. ಇಲ್ಲಿ ನಾಲ್ಕು ಅಂಶಗಳನ್ನು ನಾವು ಗಮನಿಸಬಹುದು. ಆದರೆ ಅವುಗಳಿಗೆ ಆಧಾರ ಎರಡೇ ಅಂಶ : ಬೋಧನೆ ಮತ್ತು ಅನ್ಯೋನ್ಯತೆ. 46ನೇ ವಚನದ ಪ್ರಕಾರ : ಬೋಧನೆ ದೇವಾಲಯದಲ್ಲಿ ನಡೆಯುತ್ತಿದ್ದರೆ, ಅನ್ಯೋನ್ಯತೆ ಮನೆಮನೆಗಳಲ್ಲಿ ಮುಂದುವರಿದಿತ್ತು. ದೇವಾಲಯದ ಅಂಗಗಳು ಛಾವಣಿಗಳಿಂದಾವೃತವಾದ ದ್ವಾರಮಂಟಪಗಳಿಂದ ಆವರಿಸಲ್ಪಟ್ಟಿತ್ತು. ಅವುಗಳನ್ನು ಗುರುಗಳು ಬೋಧನೆಗಳಿಗಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಅಪೋಸ್ತಲರ ಬೋಧನೆ ಧರ್ಮವನ್ನು ಕುರಿತು ಆಳವಾದ ಧ್ಯಾನಮಾಡಲು ಪವಿತ್ರಾತ್ಮ ವರ ಕೈಹಿಡಿದು ನಡೆಯಿಸಿರಲಿಲ್ಲ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತಿತ್ತು. ಆದರೆ ಅಪೋಸ್ತಲರಿಂದ ತೀವ್ರವಾದ ಕಲಿಕೆಯ ಪ್ರಕ್ರಿಯೆ ಮುನ್ನಡೆಸಲ್ಪಟ್ಟಿತ್ತು ಮತ್ತು ಅದರಿಂದ ನಡೆಸಲ್ಪಟ್ಟ ಅದ್ಭುತಕಾರ್ಯಗಳು ಮತ್ತು ಸೂಚಕ ಕಾರ್ಯಗಳು ಅವರ ಬೋಧನೆಯನ್ನು ಪ್ರಮಾಣೀಕರಿಸಿದ್ದವು *(ಅ.ಕೃ. 2:43).*

ಆದಿಸಭೆಯ ದೈವಭಕ್ತಿಯಲ್ಲಿ ಎದ್ದುಕಾಣುತ್ತಿದ್ದ ಒಂದು ವಿಶೇಶ ವೈಶಿಷ್ಟ್ಯ : ಆಧ್ಯಾತ್ಮಿಕ ಅನ್ಯೋನ್ಯತೆ. ವಿಶ್ವಾಸಿಗಳು ಸತತವಾಗಿ ಆಲಯದಲ್ಲಿ ಒಗ್ಗಟ್ಟಾಗಿ ಇದ್ದದ್ದು ಮಾತ್ರವಲ್ಲದೆ ಮನೆಮನೆಗಳಲ್ಲಿ ಒಗ್ಗಟ್ಟಾಗಿ ಸೇರುತ್ತಿದ್ದರು. ಅಲ್ಲಿ ತಾವು ತಂದ ಊಟಗಳನ್ನು ಹಂಚಿಕೊಂಡು ಊಟಮಾಡುತ್ತಿದ್ದರು. ಕರ್ತನ ರಾತ್ರಿ ಭೋಜನದಲ್ಲಿ ಪಾಲ್ಗೊಳ್ಳುತ್ತಿದ್ದರು. ಒಂದೇ ಮನಸ್ಸಿನಿಂದ ಒಗ್ಗಟ್ಟಿನಿಂದ ಪ್ರಾರ್ಥನೆ ಮಾಡುತ್ತಿದ್ದರು. ಕ್ರಿಸ್ತನ ಶೀಘ್ರ ಬರೋಣದಲ್ಲಿ ತಮಗಿರುವ ಭರವಸೆಯನ್ನು ವ್ಯಕ್ತಪಡಿಸುತ್ತಿದ್ದರು. ಮೆಸ್ಸೀಯನು ತನ್ನ ರಾಜ್ಯವನ್ನು ಈ ಭೂಲೋಕದ ಮೇಲೆ ಸಂಸ್ಥಾಪನೆ ಮಾಡಿದಾಗ, ಆತನೊಂದಿಗೂ ಹೀಗೆ ಅನ್ಯೋನ್ಯ ಐಕ್ಯ ಭೋಜನ ಮಾಡುತ್ತೇವೆ ಎಂದು ಅವರು ನಂಬಿದ್ದರು *(ಮತ್ತಾ 26:29).*

ಆದಿಸಭೆಯ ಜೀವನದಲ್ಲಿ ಖಾಸಗಿ ಮನೆಗಳು ಬಹುಮುಖ್ಯವಾದ ಪಾತ್ರ ವಹಿಸಿದ್ದವು. ವಿಶ್ವಾಸಿಗಳು ಇನ್ನೂ ದೇವಾಲಯದ ದೈನಂದಿನ ಧರ್ಮಾಚರಣೆಗಳಿಗೆ ಹಾಜರಾಗುತ್ತಿದ್ದರು. ಬಹುಶಃ ಸಬ್ಬತ್ ದಿನದಂದು ತಮ್ಮ ಸಹಪಾಠಿ ಯ–ೆಹೂದಿಗಳೊಂದಿಗೆ ದೇವಾಲಯಕ್ಕೆ ಬಂದು ದೇವರ ಆರಾಧನೆ ಮಾಡುತ್ತಿದ್ದರು; ಆದರೆ ಕ್ರೈಸ್ತರ ವೈಶಿಷ್ಟ್ಯಪೂರ್ಣವಾದ ಕೂಟಗಳು ವಿಶ್ವಾಸಿಗಳ ಮನೆಗಳಲ್ಲಿ ನಡೆಯುತ್ತಿದ್ದವು.

**ಓದಿಕೊಳ್ಳಿ : ಅ.ಕೃ. 2:44, 45; 4:34–35. ಆದಿಕ್ರೈಸ್ತರ ಅನ್ಯೋನ್ಯತೆಯಲ್ಲಿದ್ದ ಬಹುಮುಖ್ಯವಾದ ಅಂಶ ಯಾವುದು?**

________________________________________________________

________________________________________________________

________________________________________________________

ಅಂತ್ಯಕಾಲ ಸಮೀಪಿಸಿತು ಎಂದುಕೊಂಡ ಆದಿಸಭೆಯ ವಿಶ್ವಾಸಿಗಳಿಗೆ, ಅವರ ಪ್ರಾಪಂಚಿಕ ಸ್ವತ್ತು ಅಂದರೆ ತಮ್ಮ ಖಾಸಗಿ ಆಸ್ತಿ ಅಷ್ಟೇನೂ ಮುಖ್ಯ ಎನಿಸಿರಲಿಲ್ಲ. ಆದ್ದರಿಂದ ತಮ್ಮ ಆಸ್ತಿಯನ್ನು ಮಾರಿ ಬಂದ ಹಣದಲ್ಲಿ ಸುವಾರ್ತೆ ಸಾರುವದು ಹೆಚ್ಚು ಸೂಕ್ತ ಎಂಬ ತೀರ್ಮಾನಕ್ಕೆ ಆದಿಸಭೆಯ ವಿಶ್ವಾಸಿಗಳು ಬಂದುಬಿಟ್ಟಿದ್ದರು. ಆದ್ದರಿಂದ ನಾಳೆಯ ಕುರಿತು ಚಿಂತೆ ಮಾಡುವುದಕ್ಕೆ ಯಾವ ಕಾರಣವೂ ಇರಲಿಲ್ಲ. ಯಾಕೆಂದರೆ ಅವರಿಗೆ ಬೇಕಾದದ್ದನ್ನೆಲ್ಲ ಮೆಸ್ಸಿಯನ್ನೇ ಆತನ ರಾಜ್ಯದಲ್ಲಿ ಅವರಿಗೆ ದಯಪಾಲಿಸುವವನಾಗಿದ್ದನು (ಲೂಕ 22:29). ಇಂತಹ ಹಂಚಿಕೊಂಡು ಉಣ್ಣುವ ಮನೋಭಾವದಿಂದ ಅವರಲಿ್ಲನ ಐಕ್ಯವೆ ಇನ್ನೂ ಆಳವಾಗಿ ಬೇರೂರತೊಡಗಿತ್ತು. ಇದರ ಜೊತೆಗೆ ಕ್ರೈಸ್ತೀಯ ಪರೋಪಕಾರಕ್ಕೆ ಅವರೆಲ್ಲ ಅಸಾಮಾನ್ಯ ನಿದರ್ಶನವಾಗಿದ್ದರು.

**ದೇವರು ನಿಮಗೆ ಕೊಟ್ಟಿರುವ ವರದಾನಗಳಲ್ಲಿ ನೀವು ಅದೆಷ್ಟು ಧಾರಾಳವಾಗಿ ಪರೋಪಕಾರ ಮಾಡುವ ಮನೋಭಾವದವರಾಗಿದ್ದೀರಿ?**

## ಹುಟ್ಟುಕುಂಟನನ್ನು ಸ್ವಸ್ಥಪಡಿಸಿದ್ದು

ಅ.ಕೃ. 3:1 ರಲ್ಲಿ ಪೇತ್ರ ಮತ್ತು ಯೋಹಾನ ಮಧ್ಯಾಹ್ನ ಮೂರು ಘಂಟೆಗೆ ನಡೆಯುವ ಆರಾಧನೆಗೆ ಹೋಗುವುದನ್ನು ಕಾಣುತ್ತೇವೆ. ಆದಿಸಭೆಯ ವಿಶ್ವಾಸಿಗಳಲ್ಲಿ ಇನ್ನೂ ಯೆಹೂದಿ ಅಭ್ಯಾಸಗಳಿರುವದು ಸಹ ಇಲ್ಲಿ ಕಂಡುಬರುತ್ತದೆ. ಅವರು ಆಲಯಕ್ಕೆ ಪ್ರಸಂಗಮಾಡಲೋ ಅಥವಾ ಕ್ರೈಸ್ತ ಸಭೆಗೆ ಯೆಹೂದಿಗಳನ್ನು ಸೇರಿಸುವದಕ್ಕಾಗಿಯೋ ಹೋಗಲಿಲ್ಲ. ಆದರೆ ಇಲ್ಲಿಯವರೆಗೂ ಯೆಹೂದಿ ಸಂಪ್ರದಾಯಗಳಿಗೆ ಅಂಟಿಕೊಂಡು ಬಂದಂತೆ ಕಾಣುತ್ತದೆ. ಯಾಕೆಂದರೆ ಅವರಿನ್ನೂ ಯೆಹೂದಿಗಳಾಗಿದ್ದರು *(ಅ.ಕೃ. 20:16; 21:17–26).* ಅಲ್ಲೊಂದು ಬೆರಗುಗೊಳಿಸುವ ಅದ್ಭುತಕಾರ್ಯ ನೆರವೇರಿತ್ತು. ಆ ಅದ್ಭುತಕಾರ್ಯ, ಪೇತ್ರ ಇನ್ನೊಂದು ಪ್ರಸಂಗ ಮಾಡಲು ಸದಾವಕಾಶ ಮಾಡಿಕೊಟ್ಟಿತ್ತು.

ಓದಿಕೊಳ್ಳಿ : ಅ.ಕೃ. 3:12–26; ಪೇತ್ರ ತನ್ನ ಪ್ರಸಂಗದಲ್ಲಿ ಯಾವ ಅಂಶಗಳಿಗೆ ಹೆಚ್ಚು ಒತ್ತುಕೊಟ್ಟು ಮಾತನಾಡಿದ್ದನು?

ಆದಿಸಭೆಯ ಈ ಪ್ರಸಂಗದಲ್ಲಿ ಐದುಮುಖ್ಯವಾದ ಅಂಶಗಳನ್ನು ಗಮನಿಸಬಹುದು. ಯೇಸುಸ್ವಾಮಿ ಸಂಕಟಕ್ಕೊಳಗಾದ ಮೆಸ್ಸೀಯನು *(ಅ.ಕೃ. 3:18)*; ದೇವರು ಆತನನ್ನು ಪುನರುತ್ಥಾನಗೊಳಿಸಿದನು *(ಅ.ಕೃ. 3:15)*; ಯೇಸುಕ್ರಿಸ್ತನು ಪರಲೋಕಕ್ಕೆ ಏರಿಹೋದನು *(ಅ.ಕೃ. 3:13)*; ಆತನು ಮತ್ತೆ ಹಿಂತಿರುಗಿ ಬರುವನು *(ಅ.ಕೃ. 3:20)*; ಯಾರು ತಮ್ಮ ಪಾಪಗಳಿಗಾಗಿ ಅತ್ತು ಕಣ್ಣೀರುಬಿಟ್ಟು ಪಶ್ಚಾತ್ತಾಪಪಡುವನೋ ಅವರ ಪಾಪಗಳು ಖಂಡಿತವಾಗಿಯೂ ದೇವರಿಂದ ಕ್ಷಮಿಸಲ್ಪಡುವದು *(ಅ.ಕೃ. 3:19).*

ಅಂದಿನ ಪರಿಸ್ಥಿತಿಗಿಂತ ಇಂದಿನ ಪರಿಸ್ಥಿತಿ ಭಿನ್ನವಾಗಿದ್ದರು ನಾವು ಪ್ರಪಂಚಕ್ಕೆ ತಲುಪಿಸಬೇಕಾದ ಸಂದೇಶ ಮಾತ್ರ ಬದಲಾಗಿಲ್ಲ; ಅಂದರೆ ಅಪೋಸ್ತಲರಿನ್ನೂ ಯೆಹೂದಿಗಳ ಧರ್ಮಾಚರಣೆಯ ವ್ಯವಸ್ಥೆಯಲ್ಲಿದ್ದರು. ಧರ್ಮಗಳನ್ನು ಬದಲಾಯಿಸಿಕೊಳ್ಳುವ ಬದಲು, ಜನ, ಹಳೇ ಒಡಂಬಡಿಕೆಯಿಂದ ಹೊಸ ಒಡಂಬಡಿಕೆಯೆಡೆಗೆ ವಲಸೆ ಹೋಗಬೇಕಾಗಿತ್ತು. ದೇವಜನರಾದ ಅವರು ಮೆಸ್ಸೀಯನನ್ನು ಅಂಗೀಕರಿಸಿಕೊಳ್ಳಬೇಕಾಗಿತ್ತು. ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡ ದೀಕ್ಷಾಸ್ನಾನ ಮೂಲಕ ಹೊಸಹುಟ್ಟಿನ ಅನುಭವ ಪಡೆಯಬೇಕಾಗಿತ್ತು.

ಅಂದಿನ ಕಾಲವನ್ನು ಇಂದಿನ ಕಾಲಕ್ಕೆ ಹೋಲಿಸಿದರೆ ಸನ್ನಿವೇಶ ಬಹಳ ಬದಲಾಗಿ ಹೋಗಿದೆ, ಆದರೆ ಲೋಕಕ್ಕೆ ಸಾರಬೇಕಾದ ಸಂದೇಶದಲ್ಲಿ ಬದಲಾವಣೆ ಏನೂ ಇಲ್ಲ; ಕ್ರಿಸ್ತನು ನಮ್ಮ ಪಾಪಗಳಿಗಾಗಿ ತನ್ನ ದೇಹವನ್ನು ಯಜ್ಞದ ಕುರಿಯೋಪಾದಿಯಲ್ಲಿ ಸಮರ್ಪಿಸಿ, ಶಿಲುಬೆಯ ಮೇಲೆ ಮರಣಿಸಿದನು; ಮೂರನೇ ದಿನ ಜೀವಂತವಾಗಿ ಎಬ್ಬಿಸಲ್ಪಟ್ಟನು; ಮತ್ತು ಶೀಘ್ರದಲ್ಲಿ ಆತನು ಹಿಂತಿರುಗಿ ಬರುವವನಾಗಿದ್ದಾನೆ. ಇದರ ಅರ್ಥ : ಆತನಲ್ಲಿ ನಾವು ರಕ್ಷಣೆಯನ್ನು ಕಂಡುಕೊಳ್ಳಬಹುದು. ಪ್ರಕಟನೆಯ 14ನೇ ಅಧ್ಯಾಯದ ಮೂರು ದೇವದೂತರ ಸಂದೇಶಗಳಲ್ಲಿಯೂ – ಯೇಸುಕ್ರಿಸ್ತನು ಶಿಲುಬೆಗೆ ಹಾಕಲ್ಪಟ್ಟನು; ಯೇಸುಕ್ರಿಸ್ತನು ಮೂರನೇ ದಿನದಲ್ಲಿ ಎಬ್ಬಿಸಲ್ಪಟ್ಟನು; ಮತ್ತು ನಾವು ಸಂದೇಶಗಳನ್ನು ಎಲ್ಲೆಲ್ಲಿ ಸಾರುತ್ತೇವೆಯೋ ಅಲ್ಲೆಲ್ಲಿ ಯೇಸುಕ್ರಿಸ್ತನ ಎರಡನೇ ಬರೋಣದ ವಿಷಯ ಕೇಂದ್ರಬಿಂದುವಾಗಿರಬೇಕು.

ಈ ಪ್ರಪಂಚದಲ್ಲಿ ಕ್ರೈಸ್ತೀಯ ಜೀವನ ನಡೆಯಿಸಿಕೊಂಡು ಹೋಗುತ್ತಿರುವ ಕ್ರೈಸ್ತರಲ್ಲಿ ಕ್ರಿಸ್ತನ ಸುವಾರ್ತೆಯನ್ನು ಸಾರುವದರಲ್ಲಿ ಮುಂಚೋಣಿಯಲ್ಲಿ ಇರುವವರು ಸೆವೆಂತ್ ಡೇ ಅಡ್ವೆಂಟಿಸ್ಟ್ ಕ್ರೈಸ್ತರೇ ಆಗಿದ್ದಾರೆ. ಪ್ರಕಟನೆಯ ಮೂರನೇ ದೇವದೂತನ ಸಂದೇಶವು ಸಬ್ಬತ್ತಿನ ಸತ್ಯವನ್ನು ಪ್ರಕಟಿಸಲು ಕರೆನೀಡಿವೆ. ಈ ಸತ್ಯವನ್ನು ಮತ್ತು ಸಂದೇಶದಲ್ಲಿ ಭಾಗಿಗಳಾಗಿರುವವರನ್ನು ಕುರಿತು ಮಾತನಾಡುವದು ಸರಿ, ಆದರೆ ಈ ಸಂದೇಶದ ಕೇಂದ್ರಬಿಂದುವಾದ ಯೇಸುಕ್ರಿಸ್ತನನ್ನು ಮರೆಯಬಾರದು. ಕ್ರಿಸ್ತನ ಶಿಲುಬೆಯ ಬಳಿಯಲ್ಲಿ ಕರುಣೆ ಮತ್ತು ಸತ್ಯ ಸಂಧಿಸಿದ್ದವು ಮತ್ತು ನೀತಿ ಹಾಗೂ ಶಾಂತಿ ಒಂದನ್ನೊಂದು ಮುದ್ದಿಟ್ಟವು. ಪಾಪಿಯ ಗಮನವನ್ನು ಶಿಲುಬೆಯತ್ತ ಒಯ್ಯಬೇಕು; ಶಿಶುಭಾವದಿಂದ ಪಾಪಿಯು ಕ್ರಿಸ್ತನ ರಕ್ಷಕನಲ್ಲಿ ಭರವಸೆಯಿಡಬೇಕು; ಆತನ ನೀತಿಯನ್ನು ಅಂಗೀಕಾರ ಮಾಡಿಕೊಳ್ಳಬೇಕು; ಮತ್ತು ಆತನ ಕರುಣೆಯಲ್ಲಿ ನಂಬಿಕೆಯಿಡಬೇಕು". ಎಲನ್ ಜಿ ವೈಟ್, *ಗಾಸ್ಪೆಲ್ ವರ್ಕರ್ಸ್*, ಪುಟ 156, 157.

## ವಿರೋಧದ ಅಲೆ ಹೆಚ್ಚಾಗತೊಡಗಿತು

ಕ್ರೈಸ್ತ ಸಭೆ ಯಶಸ್ಸಾಗಿ ಬೆಳೆಯುತ್ತಿದ್ದಂತೆ, ಯೆರೂಸಲೇಮಿನ ನಾಯಕರುಗಳಿಂದ ವಿರೋಧವನ್ನು ಎದುರಿಸಬೇಕಾಯಿತು. ಯೆರೂಸಲೇಮಿನ ದೇವಾಲಯವು ಮಹಾಯಾಜಕ ಮತ್ತು ಆತನ ಜತೆಗಾರರಿಂದ ನಡೆಸಲ್ಪಡುತ್ತಿತ್ತು. ಅವರಲ್ಲಿ ಬಹುಮಂದಿ ಸದ್ದುಕಾಯರಾಗಿದ್ದರು. ಮಹಾಯಾಜಕ ಹಿರಿಸಭೆಯ ಅಧ್ಯಕ್ಷನಾಗಿದ್ದ. ಹಿರಿಸಭೆಯು ಸದ್ದುಕಾಯದು ಮತ್ತು ಫರಿಸಾಯಕರುಗಳಿಂದ ತುಂಬಿತ್ತು. ಸದ್ದುಕಾಯರುಗಳಿಗೆ ಪುನರುತ್ಥಾನದಲ್ಲಿ ನಂಬಿಕೆಯಿಲ್ಲದ ಕಾರಣ, ಪೇತ್ರ ಮತ್ತು ಯ–ೋಹಾನ, ಕ್ರಿಸ್ತನು ಸತ್ತು ಸಮಾಧಿಯಿಡಲ್ಪಟ್ಟ ಮೂರನೇ ದಿನದಂದು ಜೀವಂತನಾಗಿ ಎದ್ದನೆಂದು ಬೋಧನೆ ಮಾಡುತ್ತಿದ್ದದ್ದು ಅವರನ್ನು ಬಹಳವಾಗಿ ಕಾಡಿತ್ತು. ಆದ್ದರಿಂದ ಅವರು ಪೇತ್ರ ಮತ್ತು ಯೋಹಾನ ಜನರ ಬಳಿ ಮಾತನಾಡುತ್ತಿರುವಾಗಲೇ ಅವರನ್ನು ಬಂಧಿಸಿದ್ದರು. ಬಂಧಿಸಿದ ಗಳಿಗೆ ಸಾಯಂಕಾಲವಾಗಿದ್ದರಿಂದ ಅವರು ಪೇತ್ರ ಮತ್ತು ಯೋಹಾನನನ್ನು ಬಂಧಿಸಿ ಮರುದಿನದವರೆಗೂ ಕಾವಲಲ್ಲಿಟ್ಟರು (ಅ.ಕೃ. 4:1–7). ನಂತರ ಅವರನ್ನು ಹಿರಿ ಸಭೆಯವರ ಮುಂದೆ ತರಲಾಯಿತು.

**ಓದಿಕೊಳ್ಳಿ : ಅ.ಕೃ. 4:1–18. ನೀವು ಯಾವ ಅಧಿಕಾರದಿಂದ ಹೀಗೆಲ್ಲ ಮಾಡುತ್ತೀರಿ ಎಂದು ಕೇಳಿದಾಗ, ಪೇತ್ರನ ಉತ್ತರ ಅದಕ್ಕೆ ಏನಾಗಿತ್ತು? ಪೇತ್ರನು ಈ ಪ್ರಶ್ನೆಗೆ ನೀಡಿದ ಉತ್ತರ ಅವರನ್ನು ದಂಗುಬಡಿಸಿತ್ತು. ಅವರನ್ನು ಆಶ್ಚರ್ಯಕ್ಕೆ ಒಳಗಾಗುವಂತೆ ಮಾಡಿದ ಅವನ ಸಂದೇಶವಾದರೂ ಏನು?**

________________________________________

________________________________________

________________________________________

ಯೆಹೂದಿ ನಾಯಕರುಗಳು, ಪೇತ್ರ ಮತ್ತು ಯೋಹಾನರನ್ನು ಯಾವ ಅಧಿಕಾರದಿಂದ ನೀವು ಹೀಗೆಲ್ಲ ನಡೆದುಕೊಳ್ಳುತ್ತೀರಿ ಎಂದು ಕೇಳಿದ್ದರ ಹಿನ್ನೆಲೆಯಲ್ಲಿ ಅವರಿಗೆ ಪೇತ್ರ–ಯೋಹಾನರು ಯಾವ ಶಕ್ತಿಯಿಂದ ಹೀಗೆ ನಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳುವ ಹಂಬಲವಿತ್ತು. ಆಗ ಪೇತ್ರನು, ತಾವು ಮಾಡುವ ಅದ್ಭುತ ಕಾರ್ಯಗಳನ್ನು ಯೇಸುಸ್ವಾಮಿಯ ನಾಮದಲ್ಲೇ ಮಾಡುತ್ತೇವೆ ಎಂದು ಹೇಳಿದ್ದು ಮಾತ್ರವಲ್ಲದೆ, ಆ ನಾಮದಿಂದಲೇ ರಕ್ಷಣೆ ಸಾಧ್ಯ ಎಂದು ಹೇಳಿದ್ದನು. ಅಪೋಸ್ತಲರಿಬ್ಬರೂ ಯೆಹೂದಿ ವ್ಯವಸ್ಥೆಯಲ್ಲೇ ಅತ್ಯಂತ ಹಿರಿದಾದ ಆಡಳಿತ ವ್ಯವಸ್ಥೆಯ ಮುಂದೆ ಬಂದು ನಿಂತಿದ್ದರು. ಆದರೂ ಅದಕ್ಕಿಂತಲೂ ಅತ್ಯುನ್ನತ ವ್ಯವಸ್ಥೆಯಾದ ದೇವರ ಸೇವೆಯ ಕಾಯಕ ಕೈಗೊಂಡಿದ್ದರು. ಇವರು ಸರಳ ಮನಸ್ಸಿನವರು; ಶಾಲೆ ಕಲಿಯದ ಗಲಿಲಾಯದ ಬೆಸ್ತರುಗಳು. ಆದ್ದರಿಂದಲೇ ಅವರ ಧೈರ್ಯ ಮತ್ತು ವಾಗ್ಮಿಯತನ ಜನರು ಬೆರಗುಗೊಳ್ಳುವಂತೆ ಮಾಡಿತ್ತು. ಅಂದಿನ ನಾಯಕರುಗಳು ಈ ಬದಲಾವಣೆಯನ್ನು ಗ್ರಹಿಸಿದ್ದರೋ ಇಲ್ಲವೋ ತಿಳಿಯದು, ಆದರೆ ಅಪೋಸ್ತಲರುಗಳು ಯೇಸುಸ್ವಾಮಿಯವರ ಭವಿಷ್ಯವಾಣಿ ನುಡಿದಂತೆಯೇ ಅವರು ಪವಿತ್ರಾತ್ಮನಿಂದ ನೆರೆಯಲ್ಪಟ್ಟಿದ್ದರು (ಮತ್ತಾಯ 10:16–20).

ಪೇತ್ರ ಮತ್ತು ಯೋಹಾನರು ನಡೆಯಿಸಿದ ಅದ್ಭುತ ಕಾರ್ಯವನ್ನು ಅವರು ನಿರಾಕರಿಸಲಾಗಲಿಲ್ಲ. ಏಕೆಂದರೆ ಹುಟ್ಟುಕುಂಟನನ್ನು ನಡೆಯುವಂತೆ ಮಾಡಿದ್ದರಿಂದ ಅವನೂ ಸಹ ಅಲ್ಲೇ ಇದ್ದನು. ಎಲ್ಲರ ಗಮನವೂ ಅವನ ಕಡೆಗಿತ್ತು. ಆಗ ಹಿರಿಸಭೆಯವರು ಅಪೋಸ್ತಲರಿಗೆ ಯೇಸುವಿನ ಹೆಸರನ್ನು ಎತ್ತಿ ಮಾತಾಡಬಾರದು. ಉಪದೇಶ ಮಾಡಲೂ ಬಾರದು ಎಂದು ಎಚ್ಚರಿಸಿದ್ದರು. ಅಂದಿನ ಆ ಚಳುವಳಿ ಎಷ್ಟರಮಟ್ಟಿಗೆ ಜನಪ್ರಿಯವಾಗಿತ್ತೆಂದರೆ, ಹಿರೀಸಭೆಯವರು ಅಪೋಸ್ತಲರ ಸಂದೇಶಗಳನ್ನು ಕೇಳಿ ಹೆದರುತ್ತಿದ್ದರು. ನಡೆದ ನಿಜ ಘಟನೆಯನ್ನು ಸುಳ್ಳಾಗಿಸಲು ಅವರಿಗೆ ಅಸಾಧ್ಯವಾಗಿತ್ತು. ಅವರು ಪೂರ್ವಗ್ರಹ ಪೀಡಿತರಾಗಿದ್ದರು. ತಮ್ಮ ತಪ್ಪಾದ ಆಚರಣೆಗಳನ್ನೇ ಸರಿಯೆಂದು ಪ್ರತಿಪಾದಿಸುವ ಬಯಕೆಯಿಂದ ತಮ್ಮ ಅದಿ ಕಾರವನ್ನು ದುರುಪಯೋಗಪಡಿಸಿಕೊಳ್ಳಲಾರಂಭಿಸಿದ್ದರು.

ಅಂತ್ಯದಲ್ಲಿ ಪೇತ್ರನು ಆಡಿದ ಅಂತ್ಯಮಾತುಗಳು : "ದೇವರ ಮಾತನ್ನು ಕೇಳುವದಕ್ಕಿಂತಲೂ ನಿಮ್ಮ ಮಾತನ್ನು ಕೇಳುವದು ದೇವರ ಮುಂದೆ ನ್ಯಾಯವೋ ಏನು? ನೀವೇ ತೀರ್ಪುಮಾಡಿಕೊಳ್ಳಿರಿ; ನಾನಂತೂ ಕಂಡು ಕೇಳಿದ್ದನ್ನು ಹೇಳದೆ ಇರಲಾರೆವು...." ಅಪೋಸ್ತಲರ ಕೃತ್ಯಗಳ ಪುಸ್ತಕದಲ್ಲಿ ಮುತ್ತು ಹವಳದ ರೀತಿಯಲ್ಲಿ ಇರಲ್ಪಟ್ಟಿವೆ (ಅ.ಕೃ. 4:19,20).

**ಯಾವದೇ ಸಂದರ್ಭದಲ್ಲಾಗಲಿ ಮತ್ತು ಯಾವದೇ ಮಟ್ಟದಲ್ಲಾಗಲಿ ಅಧಿಕಾರದ ಮೇಲಿನ ಆಶೆ ಎಷ್ಟರ ಮಟ್ಟಿಗೆ ಅಪಾಯಕಾರಿ ಎಂಬುದನ್ನು ಕುರಿತು ಚಿಂತನೆ ಮಾಡಿನೋಡಿ. ಕ್ರೈಸ್ತರುಗಳಿಗೆ ಸೇವಕರಾಗಿರಲು ಕರೆನೀಡಲಾಗಿದೆ. ಆದ್ದರಿಂದ ಅಧಿಕಾರ ಆಮೀಷದ ರೂಪದಲ್ಲಿ ಬರುವಾಗ ನಾವು ಎಚ್ಚರದಿಂದಿರಬೇಕು ಏಕೆ?**

**ಬುಧವಾರ** **ಜುಲೈ, 18**

## ಅನನೀಯ ಮತ್ತು ಸಪ್ಫೈರಳೂ

ಆದಿಸಭೆಯ ಕಾಲಕ್ಕೆ ಸಭೆಗೆ ಸದಸ್ಯರಾಗಲು, ಸದಸ್ಯರು ಶ್ರೀಮಂತರಾಗಿರಬೇಕು ಅಥವಾ ಆಸ್ತಿ ಸಂಗ್ರಹ ಮಾಡಿಟ್ಟುಕೊಳ್ಳಬೇಕು ಎಂಬ ಯಾವ ಕರಾರು ಇರಲಿಲ್ಲ. ಅವರ ಆಸ್ತಿಯನ್ನು ಸಭೆಗೆ ದಾನಮಾಡಬೇಕು ಎಂಬ ನಿಯಮವೂ ಇರಲಿಲ್ಲ. ಆದರೆ ಅನೇಕ ಜನ ತಾವಾಗಿಯೇ ತಮ್ಮ ಆಸ್ತಿಪಾಸ್ತಿಗಳನ್ನು ಮಾರಿ ಸಭೆ ಬೆಳೆಯಲು ಸಹಾಯಮಾಡುತ್ತಿದ್ದುದನ್ನು ನಾವು ಸತ್ಯವೇದದಲ್ಲಿ ಕಾಣುತ್ತೇವೆ. ಇಂತಹ ಕೆಲವು ನಿದರ್ಶನಗಳು ಇದೇ ಸಮುದಾಯಕ್ಕೆ ಸ್ಫೂರ್ತಿಯನ್ನು ನೀಡಿದ್ದವು. ಇದಕ್ಕೆ ಉತ್ತಮ ಉದಾಹರಣೆ: ಬಾರ್ನಬನು *(ಅ.ಕೃ. 4:36, 37).* ಆದಿಸಭೆಯ ಬೆಳವಣಿಗೆಯಲ್ಲಿ ಅವನು ಬಹಳ ಮುಖ್ಯವಾದ ಪಾತ್ರವಹಿಸುತ್ತಾನೆ. ಮುಂದೆ ಈ ಪುಸ್ತಕದಲ್ಲಿ ಅದನ್ನು ಕುರಿತು ಓದೋಣ.

ಹೀಗಿರುವಾಗ ಕೆಲವು ನಕಾರಾತ್ಮಕ ನಿದರ್ಶನಗಳೂ ನಡೆದುದ್ದುಂಟು. ಇಂತಹ ನಿದರ್ಶನಗಳು ಸಭೆಯ ಹೊರಗಿನಿಂದ ಬಂದದ್ದಲ್ಲ. ಅವು ಸಭೆಯ ಒಳಗಿದ್ದುಕೊಂಡು, ಸಭೆಯ ಒಗ್ಗಟ್ಟಿಗೆ ಬೆದರಿಕೆ ಒಡ್ಡಿದ್ದವು. ಆಗ ತಾನೇ ಸಭೆಗೆ ಹೊರಗಿನಿಂದ ಆಕ್ರಮಣ ಪ್ರಾರಂಭವಾಗಿದ್ದ ಕಾಲದಲ್ಲಿ ನಡೆದ ಈ ಘಟನೆ ದುರಂತವೇ ಸರಿ.

**ಓದಿಕೊಳ್ಳಿರಿ : ಅ.ಕೃ. 5:1–11; ಈ ಕಥೆಯಿಂದ ನಾವು ಕಲಿಯಬೇಕಾದ ಪಾಠವೇನು?**

______________________________________________________________

______________________________________________________________

______________________________________________________________

ಲೂಕ ಈ ಕಥೆಯ ಎಲ್ಲ ವಿವರಗಳನ್ನು ಇಲ್ಲಿ ನೀಡಿಲ್ಲದಿದ್ದರೂ, ಅನನೀಯ ಮತ್ತು ಸಪ್ಫೈರಳ ಮೂಲಭೂತ ಸಮಸ್ಯೆ ಅವರು ಮೊದಲಿಗೆ ಹಣವನ್ನು ತಮ್ಮಲ್ಲಿಟ್ಟುಕೊಳ್ಳಬೇಕೆಂಬ ಮನಸ್ಸು ಮಾಡಿರಲಿಲ್ಲ. ಆದರೆ ಸಮುದಾಯದಲ್ಲಿದ್ದ ಮೋಸದ ಅಭ್ಯಾಸಗಳ ಬಲಿಪಶುವಾಗಿಬಿಟ್ಟರು. ಈ ಪಾಪ, ಮುಂದಾಲೋಚನೆ ಇಲ್ಲದೆ ಮಾಡಿದ ಕೃತ್ಯದ ಫಲಿತಾಂಶವಲ್ಲ. ಆದರೆ ಬಹಳ ಎಚ್ಚರಿಕೆಯಿಂದ ರೂಪಿಸಿಕೊಂಡ ಯೋಜನೆಯದು ಮತ್ತು ಬೇಕೆಂದೇ "ಕರ್ತನ ಆತ್ಮನನ್ನು ಪರೀಕ್ಷಿಸುವುದಕ್ಕೆ" ಮಾಡಿದ ಹುನ್ನಾರ (ಅ.ಕೃ. 5:9). ಅವರು ತಮಗಿದ್ದ ಆಸ್ತಿಯನ್ನು ಮಾರಿ, ಮಾರಿದ ನಂತರ ಬಂದ ಹಣವನ್ನು ಸಭೆಗೆ ತಂದುಕೊಡಬೇಕೆಂದು ಸಭೆ ಅವರಿಗೆ ಯಾವ ಕರಾರನ್ನು ಹಾಕಿರಲಿಲ್ಲ. ಆದರೆ ಅವರು ಹಾಗೆ ಮಾಡಬೇಕು ಅಂ–ದುಕೊಂಡಿದ್ದು ಸ್ವಂತ ತೀರ್ಮಾನವೇ ವಿನಹ ಯಾರ ಜುಲುಮೆಯೂ ಆಗಿರಲಿಲ್ಲ. ಆದರೆ ಹಾಗೆ ಮಾಡುವವರನ್ನು ಆ ಕಾಲಕ್ಕೆ ಸಭೆ ತುಂಬಾ ಶ್ಲಾಘಿಸುತ್ತಿತ್ತು. ಬಹುಶಃ ಎಲ್ಲರಿಂದ ಹೊಗಳಿಕೆ ಪಡೆದುಕೊಳ್ಳಬೇಕು ಎಂಬ ಕಾರಣಕ್ಕೋಸ್ಕರ ಅವರು ತಮ್ಮ ಆಸ್ತಿಯನ್ನು ಮಾರಿ ಮಾರಿದ್ದರಲ್ಲಿ ಬಂದ ಹಣವನ್ನು ಸಭೆಗೆ ಕೊಡುವ ತೀರ್ಮಾನ ಮಾಡಿದ್ದಿರಬಹುದು.

ತೀರ್ಮಾನ ಶ್ರೇಷ್ಠವಾದದ್ದು, ಆದರೆ ದೇವರಿಗೆ ಕೊಡಲು ತೀರ್ಮಾನ ಮಾಡಿದ್ದರಲ್ಲಿ ಕದಿಯುವ ಮನಸ್ಸು ಮಾಡಬಾರದಾಗಿತ್ತು. ಅವರು ಹೀಗೆ ನಡೆದುಕೊಂಡ ಕಾರಣದಿಂದಲೇ ದೇವರು ಅವರನ್ನು ಅಷ್ಟು ಘೋರವಾಗಿ ಶಿಕ್ಷಿಸಿದಿದ್ದರಬೇಕು. ಯೇಸುಸ್ವಾಮಿಯ ಬರೋಣ ಶೀಘ್ರವಾಗಿದೆ ಎಂಬ ಮೂಲದಿಂದ ಸಭೆಯ ಅಂದಿನ ಧಾರ್ಮಿಕ ಜೀವನ ರೂಪುಗೊಂಡಿದ್ದರೂ ಆಗತಾನೇ ಅಸ್ತಿತ್ವಕ್ಕೆ ಬರುತ್ತಿದ್ದ ಸಭೆಯ ಮೇಲೆ ಋಣಾತ್ಮಕ ಪ್ರಭಾವ ಬೀರುತ್ತಿತ್ತು. ಸಪ್ಫೈರಳಿಗಾದರೋ ಪಶ್ಚಾತ್ತಾಪಪಡಲು ಒಂದು ಅವಕಾಶ ನೀಡಲಾಗಿತ್ತು. ಆದರೆ ಅನನೀಯನಿಗೆ ಅಂತಹ ಅವಕಾಶ ನೀಡಲಾಗಿತ್ತೇ ಎಂಬುದರ ಉಲ್ಲೇಖವಿಲ್ಲ. ಬಹುಶಃ ಈ ಸಾಮಾನ್ಯವನ್ನು ಬಹಳ ಸಂಕ್ಷಿಪ್ತವಾಗಿ ನಿರೂಪಿಸಲಾದ ಕಾರಣ ಆ ಉಲ್ಲೇಖ ಕೈಬಿಟ್ಟುಹೋಗಿರಬಹುದು (ಅ.ಕೃ. 5:8).

ಮುಖ್ಯವಾಗಿ ಗಮನಿಸಬೇಕಾದ ಅಂಶ : ಆದಿಯಿಂದ ಅಂತ್ಯದವರೆಗೆ ಅವರು ಪಾಪಮಯವಾಗಿ ನಡೆದುಕೊಂಡಿದ್ದರು. ದೇವರು ದೃಷ್ಟಿಯಲ್ಲಿ ಪಾಪ ಎಂಬುದು ಒಂದು ಬಹು ಗಂಭೀರವಾದ ವಿಷಯ (ಯೆಹೆ 18:20; ರೋಮ 6:23).

ಒಮ್ಮೊಮ್ಮೆ ಪಾಪಮಾಡಿದ ಆ ಕ್ಷಣದಲ್ಲಿ) ದೇವರು ಶಿಕ್ಷೆ ನೀಡದಿದ್ದರೂ, ದೇವರ ದೃಷ್ಟಿಯಲ್ಲಿ ಪಾಪ ಹೇಯವಾದ ಕೆಲಸವೇ ಸರಿ. ನಮಗಾಗಬೇಕಾದ ಶಿಕ್ಷೆ ಮುಂದೂಡಿದ್ದರೆ ದೇವರು ನಮ್ಮ ವಿಷಯದಲ್ಲಿ ಅದೆಷ್ಟು ದಯೆ ತೋರಿದ್ದಾರೆ ಎಂಬುದನ್ನು ಅದು ಸತತವಾಗಿ ಜ್ಞಾಪಿಸುತ್ತಿರಬೇಕು *(2 ಪೇತ್ರ 3:9)*.

ಆದಿಸಭೆಯ ಈ ಇಬ್ಬರು ಸದಸ್ಯರು, ದೇವರು ಕೃಪೆಯ ಎಲ್ಲೆಯನ್ನು ಮೀರಿ ನಡೆದು ನಾಶವಾದಂತೆ ನಾವು ನಾಶವಾಗದಿರಲು ನಾವೇಕೆ ಎಚ್ಚರದಿಂದಿರಬೇಕು?

**ಗುರುವಾರ** **ಜುಲೈ, 19**

## ಎರಡನೇ ಬಂಧನ

ಅನನೀಯ ಮತ್ತು ಸಪ್ಫೈರಳ ವಿಷಯದಲ್ಲಿ, ಅವರ ಪಾಪವನ್ನು ದೇವರ ನ್ಯಾಯವಿಚಾರಣೆಗೆ ತರಲು ಅಪೋಸ್ತಲರನ್ನು ಉಪಯೋಗಿಸಿಕೊಂಡಂತೆ, ಪಾಪಿಗಳಿಗೆ ದೇವರ ಕೃಪೆಯನ್ನು ತರುವ ವಿಷಯದಲ್ಲಿಯೂ ಅವರನ್ನು ಉಪಯೋಗಿಸಿಕೊಳ್ಳಬಹುದು. ದೇವರಾತ್ಮನು ಅವರ ಮುಖಾಂತರ ಕೆಲಸ ಸೇವೆಯೇ ಸಾಕ್ಷಿಯಾಗಿತ್ತು *(ಅ.ಕೃ. 5:12–16)*. ಅದರಲ್ಲೂ ಪೇತ್ರನ ನೆರಳು ರೋಗಿಗಳ ಮೇಲೆ ಬಿದ್ದರೆ ಸಾಕು ಅವರ ರೋಗ ವಾಸಿಯಾಗುತ್ತಿದ್ದದ್ದು ಅತ್ಯಾಶ್ಚರ್ಯವನ್ನುಂಟು ಮಾಡುತ್ತಿತ್ತು. ಇದಕ್ಕೆ ಸಮನಾದ ಯೇಸುಸ್ವಾಮಿಯವರ ಬಟ್ಟೆಯ ಗೊಂಡೆಯನ್ನು ಮುಟ್ಟಿ ರಕ್ತಕುಸುಮ ರೋಗ ವಾಸಿಮಾಡಿಕೊಂಡ ಹೆಂಗಸಿನ ನೈಜ ಘಟನೆಯನ್ನು ಇಲ್ಲಿ ಸ್ಮರಿಸಬಹುದು. ಜನ, ಪೇತ್ರನ ನೆರಳು ರೋಗ ವಾಸಿಮಾಡಿತು ಎಂದು ಮಾತಾಡಿಕೊಳ್ಳುತ್ತಿದ್ದರು, ಆದರೆ ಲೂಕನ ಅಭಿಪ್ರಾಯ ಹಾಗೆ ಇರಲಿಲ್ಲ. ಜನರ ಮೂಢನಂಬಿಕೆಗಳ ಮಧ್ಯದಲ್ಲೂ ದೇವರು ಅವರ ಮೇಲೆ ತಮ್ಮ ಕೃಪೆ ತೋರುವದನ್ನು ನಿಲ್ಲಿಸಿರಲಿಲ್ಲ.

ಪರಿಸ್ಥಿತಿ ಹೀಗಿರುವಾಗ, ಅಪೋಸ್ತಲರು ಎಷ್ಟು ಹೆಚ್ಚುಚ್ಚಾಗಿ ಪವಿತ್ರಾತ್ಮನಿಂದ ಬಲಪಡುತ್ತಿದ್ದರೋ, ಅದಕ್ಕೆ ತಕ್ಕ ಹಾಗೇ ಹೆಚ್ಚು ಅವರಿಂದ ನಡೆಸಲ್ಪಡುತ್ತಿದ್ದ ಅದ್ಭುತಕಾರ್ಯಗಳೂ ಮತ್ತು ಸೂಚಕಕಾರ್ಯಗಳೂ ಹೆಚ್ಚುತ್ತಾ ಹೋದವು. ಅದಕ್ಕೆ ಪೂರಕವಾಗಿ ಅವರ ಕಾಲದಲ್ಲಿದ್ದ ಧಾರ್ಮಿಕ ನಾಯಕರುಗಳ ಇವರುಗಳ ಮೇಲಿನ ಅಸೂಯೆಯೂ ಹೆಚ್ಚುತ್ತಾ ಹೋಯಿತು. ಆದಕಾರಣ ಅವರುಗಳು ಮತ್ತೆ ಅಪೋಸ್ತಲರನ್ನು ಎರಡನೇ ಸಾರಿಯೂ ಬಂಧಿಸಿದ್ದರು *(ಅ.ಕೃ. 5:17, 18)*. ಅಪೋಸ್ತಲರುಗಳು ಆಶ್ಚರ್ಯಕರವಾದ ರೀತಿಯಲ್ಲಿ ಸೆರೆಯಿಂದ ಹೊರಬಿದ್ದ ನಂತರ *(ಅ.ಕೃ. 5:19–24)*, ಮತ್ತು ಪೇತ್ರನ ಮತ್ತೊಂದು ಬಲವಾದ, ಧೈರ್ಯದಿಂದ ತುಂಬಿದ ಭಾಷಣವನ್ನು ಕೇಳಿಸಿಕೊಂಡ ನಂತರ, ಅಧಿಕಾರಿಗಳು ಅಲೌಕಿಕ ಶಕ್ತಿಯೊಂದು ಅವರ ಮೂಲಕ ಕೆಲಸ ಮಾಡುತ್ತಿರುವ ಸಾಧ್ಯತೆಯನ್ನು ಅವರಿಂದ ತಳ್ಳಿಹಾಕಲಾಗಲಿಲ್ಲ.

**ಓದಿಕೊಳ್ಳಿರಿ : ಅ.ಕೃ. 5:34–39 ಗಮಲಿಯೇಲ ಹಿರೀಸಭೆಯವರು ಅಪೋಸ್ತಲರನ್ನು ಕೊಂದುಹಾಕಲು ಮನಸ್ಸು ಮಾಡಿದ್ದನ್ನು ಹೇಗೆ ಬದಲಾಯಿಸಿದನು?**

____________________________________________________________________________

____________________________________________________________________________

____________________________________________________________________________

ಹಿರಿಸಭೆಯ, ಪ್ರಭಾವಿ ಅಲ್ಪಸಂಖ್ಯಾತರಾದ ಪರಿಸಾಯರನ್ನು ಒಳಗೊಂಡ, ಸದ್ದುಕಾಯರಿಂದ ನಿಯಂತ್ರಿಸಲ್ಪಡುತ್ತಿತ್ತು. ಗಮಲಿಯೇಲ ಒಬ್ಬ ಪರಿಸಾಯನೂ ಮತ್ತು ಧರ್ಮಶಾಸ್ತ್ರ ಪಾರಂಗತನೂ ಆಗಿದ್ದನು. ಹೊದಿಗಳ ಮಧ್ಯದಲ್ಲಿ ಉನ್ನತ ಗೌರವಕ್ಕೆ ಪಾತ್ರನಾಗಿದ್ದ ಅವನನ್ನು ರಬ್ಬಾನ್ ಅಂದರೆ "ನಮ್ಮ ಗುರು" ಎಂದು ಕರೆಯುತ್ತಿದ್ದರು. ಸಾಮಾನ್ಯವಾಗಿ ಕರೆಯುತ್ತಿದ್ದ "ರಬಿ" ಅಂದರೆ "ನನ್ನ ಗುರು" ಎಂದು ಸಂಬೋಧಿಸುತ್ತಿರಲಿಲ್ಲ. ಪೌಲ ಅವನ ಶಿಷ್ಯರುಗಳಲ್ಲಿ ಒಬ್ಬನಾಗಿದ್ದನು. *(ಅ.ಕೃ. 22:3)*.

ಗಮಲಿಯೇಲ ಯೆಹೂದಿಗಳ ಇತಿಹಾಸದಲ್ಲಿ ಇತ್ತೀಚಿಗೆ ನಡೆದುಹೋಗಿದ್ದ ಬಂಡಾಯದ ಚಳುವಳಿಗಳನ್ನು ಅವರು ನೆನಪಿಸಿಕೊಳ್ಳುವಂತೆ ಮಾಡಿದ್ದ. ಅಲ್ಲಿಯೂ ಸಹ ಒಂದಿಬ್ಬರು ನಾಯಕರುಗಳನ್ನು ಹಿಂಬಾಲಿಸಿದ ಜನ ದಂಗೆಯೆದ್ದಿದ್ದರು. ನಂತರದಲ್ಲಿ ಆ ನಾಯಕರುಗಳು ಕೊಲ್ಲಲ್ಪಟ್ಟರು ಮತ್ತು ಅವರ ಅನುಯಾಯಿಗಳು ಚದುರಿ ಹೋಗಿದ್ದರು. ಈ ಮೂಲಕ ಅವನು ಅವರಿಗೆ ಹೇಳಬೇಕಾದ ಪಾಠವೇನೆಂದರೆ : ಈ ಕ್ರೈಸ್ತೀಯ ಚಳುವಳಿ ಮಾನವ ಮೂಲದಿಂದ ಎಬ್ಬಿಸಲ್ಪಟ್ಟಿದ್ದರೆ ಅದು ಶೀಘ್ರದಲ್ಲಿ ಹೆಸರಿಲ್ಲದಂತೆ ಮಾಯವಾಗುತ್ತದೆ. ಆದರೆ ದೈವೀಕ ಮೂಲದಿಂದ ಅದೇನಾದರೂ ಪ್ರೇರಿಸಲ್ಪಟ್ಟಿದ್ದರೆ,

ಅಪೋಸ್ತಲರುಗಳೇ ಹೇಳಿದ ಪ್ರಕಾರ ಅದನ್ನು ತಡೆಯುವುದು ಯಾರಿಂದಾದೀತು? ಗಮಲಿಯೇಲಿನ ಬುದ್ಧಿವಾದ ಮೇಲುಗೈ ಸಾಧಿಸಿತ್ತು. ಆದರೂ ಆ ಜನ ಅಪೋಸ್ತಲರುಗಳನ್ನು ಕರೆಸಿ ಹೊಡಿಸಿ ಯೇಸುವಿನ ಹೆಸರನ್ನು ಹೇಳಿ ಮಾತಾಡಬಾರದೆಂದು ಅಪ್ಪಣೆಕೊಟ್ಟು ಅವರನ್ನು ಬಿಟ್ಟುಬಿಟ್ಟರು.

**ಒಳ್ಳೇ ಸಲಹೆಗಳು ಅತ್ಯಾವಶ್ಯ ಮತ್ತು ಸಹಾಯಕ ಎಂಬ ವಿಷಯಕ್ಕೆ ಸಂಬಂಧಪಟ್ಟಂತೆ ಈ ಕಥೆ ನಮಗೆ ತಿಳಿಸಿಕೊಡುವುದೇನು? ನಾವೊಂದು ಸಲಹೆಯನ್ನು ಕೇಳಿಸಿಕೊಳ್ಳಲು ಇಷ್ಟಪಡದಿದ್ದರೂ, ಒಳ್ಳೆಯ ಸಲಹೆಗಳಿಗೆ ತೆರೆದ ಹೃದಯದವರಾಗಿರಬೇಕು ಎಂಬುದನ್ನು ನಾವು ಕಲಿಯುವದು ಹೇಗೆ?**

**ಶುಕ್ರವಾರ** **ಜುಲೈ, 20**

**ಹೆಚ್ಚಿನ ಧ್ಯಾಯನಕ್ಕಾಗಿ :** ಯೇಸುಸ್ವಾಮಿ ತಾನು ಸೇವೆ ಮಾಡಲು ಬಂದ ಆತನ ಕುಟುಂಬದವರನ್ನೂ ಮತ್ತು ಆತನ ಹಿತಾಸಕ್ತಿಗಳನ್ನು, ಆತನ ಅನುಪಸ್ಥಿತಿಯಲ್ಲಿ, ಆತನ ಪಾರುಪತ್ಯೆಗಾರರಾದ ನಮ್ಮ ಕೈಗೆ ಒಪ್ಪಿಸಿಕೊಟ್ಟಿದ್ದಾನೆ. ಆತನು ತನ್ನ ತಂದೆಯ ಮನೆಗೆ ಹಿಂತಿರುಗಿ ಹೋಗಿದ್ದಾನೆ. ನಮಗೆ ಆತನ ಕೆಲಸದ ಉಸ್ತುವಾರಿಯನ್ನು ವಹಿಸಿದ್ದಾನೆ. ಆತನ ಬರೋಣಕ್ಕಾಗಿ ನಾವು ಕಾಯುವುದನ್ನು ಮತ್ತು ಎದುರುನೋಡುವದನ್ನು ಆತ ನಿರೀಕ್ಷಿಸುವವನಾಗಿದ್ದಾನೆ. ನಮ್ಮಲ್ಲಿರುವ ಕ್ರಿಸ್ತನ ಮೇಲಿನ ನಂಬಿಕೆಗೆ ನಾವು ಪ್ರಾಮಾಣಿಕವಾಗಿ ನಡೆದು ಕೊಳ್ಳೋಣ. ಆತನೇನಾದರೂ ಇದ್ದಕ್ಕಿದ್ದಂತೆ ಧರೆಗಿಳಿದು ಬಂದರೆ, ಆತ ನೀವು ನಿದ್ರಿಸುವದನ್ನು ಕಾಣದಿರಲಿ". ಎಲನ್ ಜಿ ವೈಟ್, *ಟೆಸ್ಟಿಮೊನೀಸ್ ಫಾರ್ ದಿ ಚರ್ಚ್*, ಸಂ. 8, ಪುಟ 32.

ಜನ ತಾವು ಕೊಟ್ಟ ಮಾತಿನ ಪಾವಿತ್ರ್ಯಕ್ಕೆ ಮತ್ತು ದೇವರ ಸೇವೆಗೆ ಮಾಡಿಕೊಂಡ ನಿರ್ಧಾರಕ್ಕೆ ಬದ್ಧರಾಗಿರಬೇಕು. ಅಂತಹ ಮಾತು ಕೊಡುವಿಕೆ ಮನುಷ್ಯರಿಂದ ಮನುಷ್ಯರಿಗೆ ಚಲಾವಣೆಗೊಳ್ಳುವ ಪ್ರಾಮಿಸರಿ ನೋಟಿನ ಹಾಗೆ ನಿರ್ಬಂಧವಾಗಬಾರದು. ದೇವರಿಗೆ ಮಾತು ಕೊಟ್ಟ ಮಾತ್ರಕ್ಕೆ ಕೊಟ್ಟ ಮಾತು ಒತ್ತಾಯ ಪಡಿಸುವಂಥದ್ದು ಎಂದು ಹೇಳಬಹುದೇ? ಹಾಗೆ ಹೇಳಲಾಗದು ಏಕೆಂದರೆ ಇಲ್ಲಿ ಕೆಲವು ತಾಂತ್ರಿಕ ಪದಗಳ ಕೊರತೆಯಿದೆ, ಮತ್ತು ಅವುಗಳನ್ನು ಧರ್ಮಶಾಸ್ತ್ರದ ಮೂಲಕ ಬಲವಂತ ಪಡಿಸಲಾಗದು, ಯಾವ ಮಾತು ಕೊಟ್ಟಿದ್ದೇವೆಯೋ ಆ ಮಾತನ್ನು ಕ್ರೈಸ್ತರಾದ ನಾವು ಅಲಕ್ಷ್ಯ ಮಾಡಬಹುದೇ? ದೇವರಿಗೆ ಕೊಟ್ಟ ಮಾತಿಗಿಂತ ಯಾವ ಕಾನೂನು ಪತ್ರ ಅಥವಾ ಬಾಂಡ್ ನಮ್ಮನ್ನು ಅವುಗಳಿಗೆ ಋಣಿಯಾಗಿಸಲು ಸಾಧ್ಯವಿಲ್ಲ". ಎಲನ್ ಜಿ ವೈಟ್ ಹೇಳಿಕೆಗಳು, *ದಿ ಎಸ್‌ಡಿಎ ಬೈಬಲ್ ಕಾಮೆಂಟರಿ*, ಸಂಪುಟ 6, ಪುಟ 1056.

**ಚರ್ಚಿಸಬೇಕಾದ ಪ್ರಶ್ನೆಗಳು**

1. **ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ವಹಿಸಿದ ಕಾರ್ಯಭಾರದಲ್ಲಿ ಎರಡು ಬಹುಮುಖ್ಯವಾದವು; ಆತನ ಶೀಘ್ರ ಹಿಂದಿರುಗುವಿಕೆಯ ನಿರೀಕ್ಷೆ ಮತ್ತು ಪ್ರಪಂಚದಾದ್ಯಂತ ಸುವಾರ್ತೆಯ ಸಾರೋಣ. ನಮ್ಮ ದೇವರ ಮೇಲಿನ ಪ್ರಜ್ಞೆ ಮತ್ತು ಪ್ರಪಂಚಕ್ಕೆ ಸುವಾರ್ತೆ ಸಾರುವುದಕ್ಕೆ ನೀಡಲಾಗಿರುವ ಕರೆ ಇವುಗಳ ಮೇಲೆ ತಿಳಿಸಿದ ಯೇಸುಕ್ರಿಸ್ತನು ವಹಿಸಿದ ಕಾರ್ಯಭಾರಗಳ ಪರಿಣಾಮವೇನು?**
2. **ಒಬ್ಬರು ಹೀಗೆ ಹೇಳಿದಾರೆ : "ಯೇಸುಸ್ವಾಮಿ ಇಂದೇ ಬರುತ್ತಾನೆ ಎಂಬ ರೀತಿಯಲ್ಲಿ ನಾವು ಸಿದ್ಧರಿರಬೇಕು. ಆದರೂ ಆತನ ಬರುವಿಕೆ ಇನ್ನೂ ನೂರು ವರುಷವಾಗಬಹುದೇನೋ ಎಂಬಂತೆ ನಮ್ಮ ಕೆಲಸವನ್ನು (ಸಭೆಯ ದೇವರ ಸೇವೆಯನ್ನು) ಸತತವಾಗಿ ಮುಂದುವರಿಸಿಕೊಂಡು ಹೋಗಬೇಕು". ಈ ಭಾವುಕತೆಯಲ್ಲಿ ಇರುವ ಜ್ಞಾನವೇನು? ಮತ್ತು ನಮ್ಮ ಜೀವನದಲ್ಲಿ ಕೊಡಲ್ಪಟ್ಟಿರುವ ದೇವರ ಕರೆಗೆ ಇದನ್ನು ಹೇಗೆ ಅನ್ವಯಮಾಡಿಕೊಳ್ಳಬಹುದು.**
3. **ನಮ್ಮ ಎಲ್ಲ ಪ್ರಸಂಗಗಳಲ್ಲಿ ಕ್ರಿಸ್ತನ ಜನನ, ಮರಣ, ಪುನರುತ್ಥಾನ ಮತ್ತು ಆತನ ಶೀಘ್ರ ಹಿಂದಿರುಗೋಣ ಕೇಂದ್ರಬಿಂದುವಾಗಿರಬೇಕೇಕೆ? ಅಥವಾ ಇದನ್ನು ಇನ್ನೊಂದು ರೀತಿಯಲ್ಲಿ ಹೀಗೂ ಸಹ ನೋಡಬಹುದು. ಈ ಘಟನೆಗಳನ್ನು ಬಿಟ್ಟು ಮಾಡುವ ಪ್ರಸಂಗ ಯಾವ ರೀತಿಯಲ್ಲಿ ಒಳ್ಳೆಯದನ್ನು ಉಂಟುಮಾಡುತ್ತದೆ?**

4. ಅನನೀಯ ಮತ್ತು ಸಪ್ಪೈರಗಳ ಕಥೆಯಿಂದ, ಬೇರೆಯವರ ಮನಸ್ಸಿನಲ್ಲಿರುವ ಆಲೋಚನೆ ಒಳ್ಳೆಯದೆ ಅಥವಾ ಕೆಟ್ಟದ್ದೆ ಎಂಬುದನ್ನು ತಿಳಿದುಕೊಳ್ಳುವದು ಅದೆಷ್ಟು ಕಷ್ಟ ಎಂಬ ವಿಷಯದಲ್ಲಿ ಕಲಿಸಿಕೊಡುವ ಪಾಠವೇನು?

5. ನಿಮಗೆ ಗೊತ್ತಿರಬಹುದಾದ ಆಧುನಿಕ ಗಮಲಿಯೇಲರುಗಳು ಯಾರು? ಅಥವಾ ನೀವೇ ಅಂತಹ ಪಾತ್ರವನ್ನು ಬಹುಶಃ ಯಾವಾಗಲಾದರೂ ವಹಿಸಿದ ಸನ್ನಿವೇಶ ಬಂದದುಂಟೇ? ಸಲಹೆ ಕೊಡುವವರು ಅಥವಾ ಪಡೆಯುವದು ಒಳ್ಳೆಯದನ್ನು ಉಂಟುಮಾಡಿದ್ದಕ್ಕೆ ನಿಮ್ಮಲ್ಲಿರುವ ಅನುಭವಗಳನ್ನು ತರಗತಿಯಲ್ಲಿ ಹಂಚಿಕೊಳ್ಳಿರಿ. ಈ ವಿದ್ಯಾಮಾನಗಳಿಂದ ನಾವು ಕಲಿಯುವ ಪಾಠಗಳೇನು?